(ದಿನಾಂಕ 31.01.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರಿದ ಪಾಟೀ ಸವಾಲು ವಾದಿಗಳ ಪರ ಶ್ರೀ ಎಸ್ ಬಿ ವಿ ವಕೀಲರಿಂದಃ-

ಕೆರೆಗೆ ಹೋದಂತಹ ಜಮೀನಿನ ಸರ್ವೆ ನಂಬರ 329. ಸದರಿ ಕೆರೆಗೆ ಹೋದಂತಹ ಜಮೀನಿಗೆ ಸಂಬಂಧಪಟ್ಟಂತೆ 2 ನೇ ಬಾರಿ ಬಂದಂತಹ ಪರಿಹಾರದ ಹಣವನ್ನು ನಾನೇ ತೆಗೆದುಕೊಂಡಿರುತ್ತೇನೆ. 2 ನೇ ಬಾರಿ ನಾನು ಹಣವನ್ನು ತೆಗೆದುಕೊಳ್ಳುವಾಗ ಸದರಿ ಸ್ವತ್ತು ಏಕ ಕುಟುಂಬದ ಆಸ್ತಿ ಆಗಿರುತ್ತದೆ ಎಂಬ ಬಗ್ಗೆ ನೋಟೀಸನ್ನು ಕೊಡಲಾಗಿರುತ್ತದೆ ಎಂದರೆ ನನಗೆ ನೆನಪು ಇರುವುದಿಲ್ಲ. ಸದರಿ ನೋಟೀಸಿನ ಪ್ರತಿಯನ್ನು ಅಸ್ಸಿಟೆಂಟ್ ಕಮೀಷನರ ರವರಿಗೂ ಕೊಡಲಾಗಿತ್ತು ಎಂದರೆ ಸರಿಯಲ್ಲ. ನಾನು ಶ್ರೀಮತಿ ವಿಶಾಲಾಕ್ಷಮ್ಮ ವಕೀಲರ ಮೂಲಕ ನಿ ಪಿ 19 ರ ಪ್ರಕಾರ ಅಸ್ಸಿಟೆಂಟ್ ಕಮೀಷನರ ರವರಿಗೆ ನೋಟೀಸನ್ನು ಕೊಟ್ಟಿರುತ್ತೇನೆಂದರೆ ಸರಿಯಲ್ಲ. ನಿ ಪಿ 19 ರ ಪ್ರಕಾರ ನಾನು ಸದರಿ ಸ್ವತ್ತಿಗೆ ಸಂಪೂರ್ಣ ಹಕ್ಕುದಾರನಾಗಿದ್ದು ಹಣವನ್ನು ಪಡೆದುಕೊಂಡಿರುವ ಬಗ್ಗೆ ಹೇಳಿರುತ್ತೇನೆಂದರೆ ಸರಿ. ದಿನಾಂಕ 14.10.2013 ರಂದು ನಿ ಪಿ 15 ರ ಪ್ರಕಾರ ನನಗೆ ನೋಟೀಸನ್ನು ಕೊಡಲಾಗಿತ್ತು ಎಂದರೆ ಸದರಿ ನೋಟೀಸು ನನಗೆ ತಲುಪಿರುವುದಿಲ್ಲ. ಸರ್ವೆ ಸಂಖ್ಯೆ260(ಎ) ರ ಸ್ವತ್ತು ಪ್ರಸ್ತುತ ನನ್ನ ಹೆಸರಿನಲ್ಲಿ ಇದೆ. ಸದರಿ ಸ್ವತ್ತು ಏಕ

ಕುಟುಂಬದ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸರ್ವೆ ಸಂಖ್ಯೆ260 (ಎ) ಸ್ವತ್ತು ಈಗಲೂ ವಾದಿಗಳು ಹಾಗೂ 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ವಾದಿಗಳು ನನ್ನ ಚಿಕ್ಕಪ್ಪನ ಮಕ್ಕಳಾಗುತ್ತಾರೆ. ನನ್ನ ತಂದೆಯ ಹೆಸರು ಸಣ್ಣ ಓಬಪ್ಪ. ನನ್ನ ಅಜ್ಜನ ಹೆಸರು ಓಬಪ್ಪ. ನನ್ನ ಚಿಕ್ಕಪ್ಪನ ಹೆಸರು ಗುಡಪಾಲಪ್ಪ. ಗುಡಪಾಲಪ್ಪನ ತಂದೆಯ ಹೆಸರು ಓಬಪ್ಪ. ಸಣ್ಣ ಓಬಪ್ಪ ಮತ್ತು ಗುಡಪಾಲಪ್ಪ ಅಣ್ಣ ತಮ್ಮಂದಿರು ಎಂದರೆ ಸರಿ. ಇಂದಿಗೂ ಸರ್ವೆ ಸಂಖ್ಯೆ 260(ಎ) ಸ್ವತ್ತು ನನ್ನ ತಂದೆ ಸಣ್ಣ ಓಬಪ್ಪ ಹಾಗೂ ನನ್ನ ಚಿಕ್ಕಪ್ಪ ಗುಡಪಾಲಪ್ಪನವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನಾನು ಸದರಿ ವಿಷಯದ ಬಗ್ಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಶಿವಾನಂದ ವಕೀಲರ ವತೀಯಿಂದ ಸರ್ವೆ ನಂಬರ 364 ರ ಸ್ವತ್ತಿನಲ್ಲಿ ನನಗೆ ಹಕ್ಕು ಇರುವುದಾಗಿ ಅಸಲು ದಾವಾ ಸಂಖ್ಯೆ 182/2012 ದಾಖಲುಪಡಿಸಿದೆ ಎಂದರೆ ಸರಿ. ಸದರಿ ಪ್ರಕರಣವು ಇನ್ನೂ ಚಾಲ್ತಿಯಲ್ಲಿ ಇರುತ್ತದೆ. ಸದರಿ ಪ್ರಕರಣವನ್ನು ನಾನು ಹಿಂಪಡೆದಿರುತ್ತೇನೆಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾವು ರಿರ್ಟನ್ ಸ್ಟೇಟ್‌ಮೆಂಟ್ ಹಾಕಿರುತ್ತೇವೆಂದರೆ ಸರಿಯಲ್ಲ. ನಾವು ಪರಿಹಾರದ ಹಣಕ್ಕೆ ಭಾಗಿದಾರರಾಗಿರುವ ಬಗ್ಗೆಯೂ ಕೂಡ ತಕರಾರಿನಲ್ಲಿ ಬರೆಯಲಾಗಿತ್ತು ಎಂದರೆ ಸರಿಯಲ್ಲ.

ಮಂಜುನಾಥ ನನ್ನ ಮಗ. ಸರ್ವೆ ನಂಬರ 395 ನನ್ನ ಮಗನ ಹೆಸರಿನಲ್ಲಿಯೇ ಇರುತ್ತದೆ. ಸದರಿ ಸ್ವತ್ತಿಗೆ ಹಕ್ಕು ಬದಲಾವಣೆಯನ್ನು ನಾನೇ ಮಾಡಿಸಿರುತ್ತೇನೆ. ಮೂಲ ದಾವಾ ಸಂಖ್ಯೆ 76/2017 ರಲ್ಲಿ ದಾವೆಯನ್ನು ದಾಖಲುಪಡಿಸಿದ್ದು ಹಾಗೂ ಅದು ದಿನಾಂಕ 01.02.2022 ನಾಳೆಯೇ ಇರುತ್ತದೆ ಎಂದರೆ ಸರಿ. ನಿ ಪಿ 1 ರ ಪ್ರಕಾರ ಸರ್ವೆ ಸಂಖ್ಯೆ329 (ಬಿ) ಸ್ವತ್ತನ್ನು ಜಂಟಿ ಸ್ವತ್ತು ಆಗಿರು ಬಗ್ಗೆ ತಹಶೀಲ್ದಾರ ರವರು ಆದೇಶ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಜಮೀನಿನ ಮೇಲೆ ನನ್ನ ಓಬ್ಬನ ಮೇಲೆ ಸಂಪೂರ್ಣ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ. ವಾದಿಗಳು ಹಾಗೂ 1 ನೇ ಪ್ರತಿವಾದಿ ಸದರಿ ಸ್ವತ್ತಿಗೆ ಜಂಟಿ ಮಾಲೀಕರಾಗಿರುತ್ತಾರೆಂದರೆ ಸರಿಯಲ್ಲ. ಸದರಿಯವರು ಸರ್ಕಾರದಿಂದ ಬಂದಂತಹ ಹಣಕ್ಕೆ ಪಾಲುದಾರರಾಗಿರುತ್ತಾರೆಂದರೆ ಸರಿಯಲ್ಲ. ಪರಿಹಾರದ ಹಣವನ್ನು ತೆಗೆದುಕೊಳ್ಳಬಾರದು ಎಂದು ದಿನಾಂಕ 22.06.2016 ರ ನ್ಯಾಯಾಲಯದ ಆದೇಶ ಇದ್ದರೂ ನಾನು ಪರಿಹಾರದ ಹಣವನ್ನು ತೆಗೆದುಕೊಂಡಿರುತ್ತೇನೆಂದರೆ ಸರಿಯಲ್ಲ. ಸದರಿ ಆದೇಶವನ್ನು ನಾನು ಉಲ್ಲಂಘನೆಯನ್ನು ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ವಾದಿ ಮತ್ತು 1 ನೇ ಪ್ರತಿವಾದಿಯ ಹಕ್ಕನ್ನು

ಮೂಲ ದಾವಾ ಸಂಖ್ಯೆ 181/2013 ಡಿ ಡಬ್ಲ್ಯೂ 1 ದಾಸರ ಓಬಪ್ಪ ಬಿನ್ ಸಣ್ಣ ಓಬಪ್ಪ

ದುರುಪಯೋಗ ಪಡಿಸಿಕೊಳ್ಳುವ ಉದ್ದೇಶದಿಂದ ಸದರಿ ದಾವೆಯನ್ನು ದಾಖಲುಪಡಿಸಿರುತ್ತೇನೆಂದರೆ ಸರಿಯಲ್ಲ. ವಾದಿಗಳು ಸರ್ವೆ ಸಂಖ್ಯೆ 329(ಬಿ) ಜಮೀನಿಗೆ ಸಂಬಂಧಪಟ್ಟಂತೆ ನನಗೆ ಯಾವುದೇ ಬಾಂಡ್ ಬರೆದುಕೊಟ್ಟಿರುವುದಿಲ್ಲವೆಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ ನಾನು ಪಡೆದಂತಹ ಪರಿಹಾರದ ಹಣದಲ್ಲಿ ವಾದಿಗಳಿಗೂ ಸಮಪಾಲು ಇರುತ್ತದೆ ಎಂದರೆ ಸರಿಯಲ್ಲ. ನಾನು ಸದರಿ ಹಣವನ್ನು ಕೊಡಲು ಬಾಧ್ಯಸ್ಥನೆಂದರೆ ಸರಿಯಲ್ಲ.

(ವಾದಿಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ